.vijaykarnataka.com
.apps.vijaykarnataka.com
ವಾಣಿಜ್ಯ | THE ECONOMIC TIMES

# ಕೀರ್ತಿನಾಥ ಕುರ್ತಕೋಟಿ ಸಾಹಿತ್ಯ ದರ್ಶನ



ನ್ಯೂ ಬುಕ್

ಕನ್ನಡ ಕಂಡ ನಿಶಿತಮತಿಯ ವಿಮರ್ಶಕರಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಕನ್ನಡದ ಪ್ರಮುಖ ಕೃತಿಗಳನ್ನು ಅವರು ವಿಶ್ಲೇಷಿಸಿದ ಬಗೆ ಇಂದಿಗೂ ವಿವಿಧ ನೆಲೆಗಳಲ್ಲಿ ಆಕರ ಗ್ರಂಥ. ವಿಶ್ವವಿದ್ಯಾಲಯ ಮಟ್ಟದಲ್ಲಂತೂ ಅವರ 'ಯುಗಧರ್ಮ ಮತ್ತು ಸಾಹಿತ್ಯದರ್ಶನ' ವಿಮರ್ಶಾ ಕಲಿಕೆಗೆ ನಿಶ್ಚಿತ ಪಠ್ಯ. ಅಪೂರ್ವ ಪ್ರಜ್ಞಾಶಕ್ತಿಯ, ಓದಿನ ವಿಸ್ತಾರವನ್ನು ಹೊಂದಿದ್ದ ಈ ವಿಮರ್ಶಕವರೇಣ್ಯರ ಕೃತಿಗಳತ್ತ ಒಂದು ವಿಸ್ತೃತ ಒಳನೋಟ ಬೀರಿದ್ದಾರೆ ಕನ್ನಡದ ಪ್ರಮುಖ ವಿಮರ್ಶಕ ಎಸ್.ಆರ್.ವಿಜಯಶಂಕರ. 'ಭಾರತೀಯ ಸಾಹಿತ್ಯ ನಿರ್ಮಾಪಕರು' ಕೃತಿ ಸರಣಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಕೀರ್ತಿನಾಥ ಕುರ್ತಕೋಟಿ' ಕೃತಿ ಕುರ್ತಕೋಟಿಯವರ ವಿಮರ್ಶಾ ಮಾರ್ಗ ಏಕೆ ನಮಗಿಂದಿಗೂ ಪ್ರಸ್ತುತ ಎಂಬುದನ್ನು ಅಧ್ಯಯನಪೂರ್ವಕವಾಗಿ ಹೇಳಿದೆ.

ಲೇಖಕರು ಸ್ವತಃ ವಿಮರ್ಶಕರು. ಕುರ್ತಕೋಟಿಯವರಲ್ಲದೆ ಇನ್ನೂ ಹಲವು ಹಿರಿಯ ಸಾಹಿತಿಗಳ ಜೊತೆ ಒಡನಾಡಿದವರು. ಹೀಗಾಗಿಯೇ ಕುರ್ತಕೋಟಿಯವರತ್ತ ಅವರ ನೋಟದಲ್ಲಿ ಅನನ್ಯ ಹೊಳಹುಗಳಿವೆ. 'ಕನ್ನಡಕ್ಕೊಬ್ಬರೇ ಕುರ್ತಕೋಟಿ' ಹೇಗೆ ಅನ್ನುವುದಕ್ಕೆ ಸ್ಪಷ್ಟನೆ ಇಲ್ಲಿದೆ. 'ಅವರ ಮಾರ್ಗದಲ್ಲಿ ಅವರೊಬ್ಬರೇ. ಅವರ ದಾರಿಯಲ್ಲಿ ನಡೆಯಬಲ್ಲಂತಹ ಮುಂದಿನ ಪೀಳಿಗೆಯ ವಿಮರ್ಶಕರು ಕಾಣುವುದಿಲ್ಲ. ಆದರೆ, ಅವರು ಬರೆದ ಸಾಹಿತ್ಯ ವಿಮರ್ಶೆ ಮುಂದಿನ ಜನಾಂಗಕ್ಕೆ ಹಲವು ವಿಚಾರಗಳನ್ನು ಕಲಿಸಿ, ಸಾಹಿತ್ಯ ವಿಮರ್ಶೆಯ ನಿರಂತರ ಅಧ್ಯಯನಕ್ಕೊಂದು ಆಕರವಾಗಬಲ್ಲ ಸಾಧನೆ ಎಂಬುದು ನಿರ್ವಿವಾದ' ಎನ್ನುವ ಲೇಖಕರು ಕೀರ್ತಿನಾಥರ ಬಳಿಕ ಸೃಷ್ಟಿಯಾಗಿರುವ ನಿರ್ವಾತವನ್ನು ಸೂಚಿಸಿದ್ದಾರೆ. ಇಂದಿನ ವಿಮರ್ಶಕರ ಮುಂದಿನ ಹಾದಿ, ಅವರೆದುರಿನ ಸಾಧ್ಯತೆಗಳನ್ನೂ ತೋರುತ್ತಾರೆ.

**ಕೀರ್ತಿನಾಥ ಕುರ್ತಕೋಟಿ**, ಲೇ: ಎಸ್.ಆರ್.ವಿಜಯಶಂಕರ; ಪ್ರ: ಕೇಂದ್ರ ಸಾಹಿತ್ಯ ಅಕಾಡೆಮಿ, ಪುಟ: 116; ಬೆಲೆ: 50 ರೂ.